ಇ) ದಿನಾಂಕ ೦೧/೬/೨೦೦೫ ರಿಂದ ಯುಹೆಚ್‌ಟಿ ಹಾಲಿಗೆ ಶೇಕಡ ೪ ರಷ್ಟು ಮೌಲ್ಯಾಧಾರಿತ ತೆರಿಗೆಯನ್ನು ವಿಧಿಸಿದ್ದು ಇದರಿಂದ ಪ್ರತಿ ಲೀಟರಿಗೆ ೭೭ ಪೈಸೆ ಹೆಚ್ಚಾಗಿದೆ, ಅಲ್ಲದೇ ಪ್ಯಾಕೇಜಿಂಗ್ ವೆಚ್ಚ ಮತ್ತು ಸಾರಿಗೆ ಸಾಗಾಣಿಕೆ ವೆಚ್ಚ ಹೆಚ್ಚಾಗಿರುವುದರಿಂದ ಪ್ರತಿ ಲೀಟರಿಗೆ ರೂ.೨.೦೦ ಏರಿಸಲಾಗಿದೆ.

ಈ) ಸ್ಲಿಮ್ ಮಿಲ್ಕ್ ಹಾಲಿನ ಮಾರುಕಟ್ಟೆ ವಿಸ್ತೀರ್ಣ ನಗರದಾದ್ಯಂತ ಹಾಗೂ ಇತರೇ ಜಿಲ್ಲಾ ಕೇಂದ್ರಗಳಲ್ಲೂ ಚದುರಿದ್ದು ಮತ್ತು ಬೇಡಿಕೆ ಕಡಿಮೆಯಿರುವುದರಿಂದ ಸಾಮಾನ್ಯ ಪ್ಯಾಕ್‌ನಲ್ಲಿ ಪ್ಯಾಕ್ ಮಾಡಿ ನಿಗದಿತ ವೇಳೆಗೆ ಗ್ರಾಹಕರಿಗೆ ದೊರಕುವಂತೆ ಮಾಡಲು ಕಷ್ಟ ಸಾಧ್ಯ. ಆದುದರಿಂದ ಸಾಮಾನ್ಯ ಪ್ಯಾಕ್ನಲ್ಲಿ ಪ್ಯಾಕ್ ಮಾಡಲು ಪ್ರಸ್ತಾವನೆ ಸದ್ಯಕ್ಕೆ ಇರುವುದಿಲ್ಲ.

<u>ಪಶುಸಂಗೋಪನೆ ಇಲಾಖೆಯ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯ ಫಲಾಸಂಭವಿಗಳು</u>

೩೬೯ (೪೭೪೯) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) :- ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಶುಸಂಗೋಪನೆ ಇಲಾಖೆಯ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಕಾರ್ಯಗತಗೊಳಿಸಿದ ಯೋಜನೆಯ ಪ್ರಗತಿಯ ವಿವರಗಳೇನು; (೨೦೦೩-೦೪ ಮತ್ತು ೨೦೦೪-೦೫)

ಆ) ಎಷ್ಟು ಜನ ಫಲಾನುಭವಿಗಳಿಗೆ ಇದರ ಸೌಲಭ್ಯವನ್ನು ನೀಡಲಾಗಿದೆ ಜಿಲ್ಲಾ ವಲಯ ಮತ್ತು ಕೇಂದ್ರಿಯ ನೆರವಿನ ಒಟ್ಟು ಮೊತ್ತ ಎಷ್ಟು; (೨೦೦೩-೦೪ ಮತ್ತು ೨೦೦೪-೦೫)

ಇ) ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕುವಾರು ಫಲಾನುಭವಿಗಳ ಸಂಖ್ಯೆ ಎಷ್ಟು?

ಶ್ರೀ ಮೆರಾಜುದ್ದೀನ್ ಎನ್. ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) ವಿಶೇಷ ಘಟಕ/ಗಿರಿಜನ ಉಪಯೋಜನೆ ೨೦೦೩-೦೪ ಮತ್ತು ೨೦೦೪-೦೫ ನೇ ಸಾಲಿನಲ್ಲಿ ರಾಜ್ಯವಲಯದಡಿಯಲ್ಲಿ ನಿಗದಿಪಡಿಸಲಾದ ಅನುದಾನವನ್ನು ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯು ಒಟ್ಟುಗೂಡಿಸಿರುತ್ತದೆ.

ವಿಶೇಷ ಘಟಕ /ಗಿರಿಜನ ಉಪಯೋಜನೆಯಡಿಯಲ್ಲಿ ೨೦೦೩-೦೪ ಮತ್ತು ೨೦೦೪-೦೫ ನೇ ಸಾಲಿಗೆ ಕೇಂದ್ರಿಯ ನೆರವಿನ ಹಣ ನಿಗದಿಪಡಿಸಿರುವುದಿಲ್ಲ.

ವಿಶೇಷ ಘಟಕ ಯೋಜನೆ :

ಜಿಲ್ಲಾವಲಯದಡಿಯಲ್ಲಿ ೨೦೦೩-೦೪ ನೇ ಸಾಲಿನ ವಿಶೇಷ ಘಟಕ ಯೋಜನೆಯಡಿಯಲ್ಲಿ ರೂ.೬೧.೫೩ ಲಕ್ಷವನ್ನು ಉಪಯೋಗಿಸಿಕೊಂಡು ೬೫೬ ಫಲಾನುಭವಿಗಳಿಗೆ ಸೌಲಭ್ಯ ನೀಡಲಾಗಿದೆ ಹಾಗೂ ೨೦೦೪-೦೫ ನೇ ಸಾಲಿನಲ್ಲಿ ೧೨೩.೪೭ ಲಕ್ಷವನ್ನು ಉಪಯೋಗಿಸಿಕೊಂಡು ೧೧೨೧ ಫಲಾನುಭವಿಗಳಿಗೆ ಸೌಲಭ್ಯ ನೀಡಲಾಗಿದೆ. ಈ ಕಾರ್ಯಕ್ರಮದಡಿಯಲ್ಲಿ ಹಸು ಘಟಕ, ಎಮ್ಮೆ, ಕುರಿ, ಹಂದಿ ಘಟಕಗಳು ಹಾಗೂ ಗಿರಿರಾಜ ಕೋಳಿ ಘಟಕಗಳನ್ನು ನೀಡಲಾಗಿದೆ.

ಗಿರಿಜನ ಉಪ ಯೋಜನೆ :-

ಜಿಲ್ಲಾ ವಲಯದಡಿಯಲ್ಲಿ ೨೦೦೩-೦೪ ನೇ ಸಾಲಿನ ಗಿರಿಜನ ಉಪಯೋಜನೆಯಡಿಯಲ್ಲಿ ರೂ.೨೦.೮೪ ಉಪಯೋಗಿಸಿಕೊಂಡು ೨೭೦ ಫಲಾನುಭವಿಗಳಿಗೆ ಸೌಲಭ್ಯ ನೀಡಲಾಗಿದೆ ಹಾಗು ೨೦೦೪-೦೫ ನೇ ಸಾಲಿನಲ್ಲಿ ರೂ. ೩೫.೩೬ ಲಕ್ಷ ಉಪಯೋಗಿಸಿಕೊಂಡು ೪೭೦ ಫಲಾನುಭವಿಗಳಿಗೆ ಸೌಲಭ್ಯ ನೀಡಲಾಗಿದೆ. ಈ ಕಾರ್ಯಕ್ರಮದಡಿಯಲ್ಲಿ ಹಸು ಘಟಕ, ಎಮ್ಮೆ, ಕುರಿ, ಹಂದಿ ಘಟಕಗಳು ಹಾಗೂ ಗಿರಿರಾಜ ಕೋಳಿ ಘಟಕಗಳನ್ನು ನೀಡಲಾಗಿದೆ.

ಆ) ರಾಜ್ಯದಲ್ಲಿ ವಿಶೇಷ ಘಟಕ ಯೋಜನೆಯಡಿಯಲ್ಲಿ ೨೦೦೩-೦೪ ನೇ ಸಾಲಿನಲ್ಲಿ ೬೫೬ ಫಲಾನುಭವಿಗಳಿಗೆ ಹಾಗೂ ೨೦೦೪-೦೫ ನೇ ಸಾಲಿನಲ್ಲಿ ೧೧೨೧ ಫಲಾನುಭವಿಗಳಿಗೆ ಒಟ್ಟು ೧೭೭೭ ಫಲಾನುಭವಿಗಳಿಗೆ ಸೌಲಭ್ಯ ನೀಡಲಾಗಿದೆ.

ರಾಜ್ಯದಲ್ಲಿ ಗಿರಿಜನ ಉಪಯೋಜನೆಯಡಿಯಲ್ಲಿ ೨೦೦೩-೦೪ ನೇ ಸಾಲಿನಲ್ಲಿ ೨೭೦ ಫಲನುಭವಿಗಳಿಗೆ ಹಾಗೂ ೨೦೦೪-೦೫ ನೇ ಸಾಲಿನಲ್ಲಿ ೪೭೦ ಫಲಾನುಭವಿಗಳಿಗೆ ಸೌಲಭ್ಯ ನೀಡಲಾಗಿದೆ.

ವಿಶೇಷ ಘಟಕ/ಗಿರಿಜನ ಉಪಯೋಜನೆ ಯಡಿಯಲ್ಲಿ ೨೦೦೩-೦೪ ಮತ್ತು ೨೦೦೪-೦೫ ಸಾಲಿಗೆ ಕೇಂದ್ರಿಯ ನೆರವಿನಡಿ ಹಣ ನಿಗದಿಪಡಿಸಿರುವುದಿಲ್ಲವಾದ್ದರಿಂದ ಜಿಲ್ಲಾ ವಲಯದಲ್ಲಿ ಉಪಯೋಗಿಸಿಕೊಂಡಿರುವ ಮೊತ್ತದ ವಿವರ ಕೆಳಕಂಡಂತಿದೆ.

ರೂ. ಲಕ್ಷಗಳಲ್ಲಿ

ವಿಶೇಷ ಘಟಕ ಯೋಜನೆ	೨೦೦೩-೦೪	೬೧.೫೩
	೨೦೦೪-೦೫	೧೨೩.೪೭
	ಒಟ್ಟು	೧೮೫.೦೦
ಗಿರಿಜನ ಉಪಯೋಜನೆ	೨೦೦೩-೦೪	೨೦.೮೪
	೨೦೦೪-೦೫	೩೫.೧೬
	ಒಟ್ಟು	೫೬.೦೦

ಇ) ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾವಲಯದ ಯೋಜನೆಯಡಿಯಲ್ಲಿ ೨೦೦೩-೦೪ ಹಾಗೂ ೨೦೦೪-೦೫ ನೇ ಸಾಲಿನಲ್ಲಿ ವಂಟನ ಬಿಡುಗಡೆಯಾಗಿದ್ದು ತಾಲ್ಲೂಕುವಾರು ಫಲಾನುಭವಿಗಳ ವಿವರಗಳು ಕೆಳಕಂಡಂತಿವೆ.

ತಾಲ್ಲೂಕು	೨೦೦೩-೦೪ ರಾಜ್ಯವಲಯ		೨೦೦೪-೦೫ ರಾಜ್ಯವಲಯ	
	ವಿಶೇಷ ಘಟಕ ಯೋಜನೆ	ಗಿರಿ ಜನ ಉಪ ಯೋಜನೆ	ವಿಶೇಷ ಘಟಕ ಯೋಜನೆ	ಗಿರಿ ಜನ ಉಪ ಯೋಜನೆ
ಮಂಗಳೂರು	೧೦	೧೦	೧೦	೫೬
ಬಂಟ್ವಾಳ	೯	೧೭	೯	೧೭
ಬೆಳ್ತಂಗಡಿ	೯	೧೭	೯	೧೭
ಪುತ್ತೂರು	೧೦	೧೦	೧೦	೧೦
ಸುಳ್ಯ	೯	೧೬	೯	೧೬
ಒಟ್ಟು	೪೭	೭೦	೪೭	೧೧೬